### ಎನ್‌ಐಟಿಕೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಪಶ್ಚಿಮ ವಲಯ ಆಯುಕ್ತ ಡಾ.ಕುಮಾರ್ ನಾಯಕ್ ಅಭಿಪ್ರಾಯ

# ವಿಶ್ವದಾದ್ಯಂತ ಇಂದಿಗೂ ಅಂಬೇಡ್ಕರ್ ಸ್ಫೂರ್ತಿ



ಎನ್‌ಐಟಿಕೆಯಲ್ಲಿ ಎಸ್‌ಸಿ- ಎಸ್‌ಟಿ ಸೆಲ್ ವತಿಯಿಂದ ಅಂಬೇಡ್ಕರ್ ದಿನಾಚರಣೆ ನಡೆಯಿತು. ವಾಣಿಜ್ಯ ತೆರಿಗೆ ಇಲಾಖೆ ಪಶ್ಚಿಮ ವಲಯ ಜಂಟಿ ಆಯುಕ್ತ ಡಾ.ಕುಮಾರ್ ನಾಯಕ್, ಎನ್‌ಐಟಿಕೆ ಸುರತ್ಕಲ್ ಪ್ರಭಾರ ನಿರ್ದೇಶಕ ಪ್ರೊ.ಜಿ.ಸಿ.ಮೋಹನ್ ಕುಮಾರ್, ಎಸ್ಸಿ/ ಎಸ್ಟಿ ಘಟಕ ಸಂಪರ್ಕಾಧಿಕಾರಿ ಡಾ.ನಾಗೇಂದ್ರಪ್ಪ ಇದ್ದರು.

■ ವಿಜಯವಾಣಿ ಸುದ್ದಿಜಾಲ ಸುರತ್ಕಲ್

ಅಸ್ಪೃಶ್ಯತೆ ನಿರ್ಮೂಲನೆ ಮತ್ತು ಮೀಸಲಾತಿ ವ್ಯವಸ್ಥೆ ಮೂಲಕ ಭಾರತೀಯ ಸಂವಿಧಾನಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಕೊಡುಗೆಗಳು ಸಮಾಜದಲ್ಲಿ ಆಳ ಪ್ರಭಾವ ಬೀರಿವೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಪಶ್ಚಿಮ ವಲಯ ಜಂಟಿ ಆಯುಕ್ತ ಡಾ.ಕುಮಾರ್ ನಾಯಕ್ ಅಭಿಪ್ರಾಯಪಟ್ಟರು.

ಎಸ್‌ಸಿ/ಎಸ್‌ಟಿ. ಸೆಲ್ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಅಂಗವಾಗಿ ಎನ್ ಐಟಿಕೆಯಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಭ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಂಬೇಡ್ಕರ್ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿದ್ದರು. ಶಿಕ್ಷಣವನ್ನು ಸಬಲೀಕರಣದ ಸಾಧನವಾಗಿ ಪ್ರತಿಪಾದಿಸಿದ್ದರು. ವಿಶ್ವದಾದ್ಯಂತದ ಜನರಿಗೆ ಇಂದಿಗೂ ಅವರೇ ಸ್ಫೂರ್ತಿ. ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಅವರ ಬೋಧನೆಗಳು ಇಂದಿಗೂ ಪ್ರಸ್ತುತ. ಭಾರತ ಸ್ವಾತಂತ್ರ್ಯ ಹೋರಾಟದ ನಿಜವಾದ ಐಕಾನ್ ಅಂಬೇಡ್ಕರ್ ಎಂದರು.

ಎನ್‌ಐಟಿಕೆ ಸುರತ್ಕಲ್ ಪ್ರಭಾರ ನಿರ್ದೇಶಕ ಪ್ರೊ.ಜಿ.ಸಿ.ಮೋಹನ್ ಕುಮಾರ್, ಎಸ್ಸಿ/ ಎಸ್ಟಿ ಘಟಕ ಸಂಪರ್ಕಾಧಿಕಾರಿ ಡಾ.ನಾಗೇಂದ್ರಪ್ಪ, ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ.ನರೇಂದ್ರನಾಥ್ ಎಸ್., ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಈ ಸಂದರ್ಭ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬೋಧಕ ಸಿಬ್ಬಂದಿಯನ್ನು ಗೌರವಿಸಲಾಯಿತು.

**ವೆಬ್‌ಸೈಟ್ ಲೋಕಾರ್ಪಣೆ:** ಕಾರ್ಯಕ್ರಮದಲ್ಲಿ ಎಸ್ಸಿ/ಎಸ್ಟಿ ಸೆಲ್ ವೆಬ್‌ಸೈಟ್ ಪ್ರಾರಂಭಿಸಲಾಯಿತು. ಇದು ಎಸ್ಸಿ/ಎಸ್ಟಿ ವಿದ್ಯಾರ್ಥಿಗಳಿಗಿರುವ ವಿದ್ಯಾರ್ಥಿವೇತನಗಳ ಮಾಹಿತಿ ಒದಗಿಸಲಿದೆ.

Vijayavani, Date : 15/04/23 p, no -02